ಸೃಜನಿ
SRUJANI: Indian Journal of Innovative Research and Development (SIJIRD)
Volume-5 Issue 1, March-April 2026, Pp. 111-115
Bi-Monthly, Peer-Reviewed, Open Access, Indexed Journal
I S S N: 2583-3510
SIRDF JOURNALS
editor@srujani.in
www.srujani.in

# ಕನ್ನಡ ಭಾಷೆಯ ಉಚ್ಚಾರಣೆ ಮತ್ತು ಬರವಣಿಗೆಯ ದ್ವಂದ್ವತೆ

**ಡಾ. ನಾಗರಾಜ ಡಿ. ಮುರಗೋಡ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಜಿ. ಪಿ. ಪೋರವಾಲ ಕಲಾ, ವಾಣಿಜ್ಯ ಮತ್ತು ವ್ಹಿ. ವ್ಹಿ. ಸಾಲಿಮಠ ವಿಜ್ಞಾನ ಮಹಾವಿದ್ಯಾಲಯ, ಸಿಂದಗಿ

**Abstract:**
*ಕನ್ನಡ ಭಾಷೆಯ ಉಚ್ಚಾರಣೆ (ಮಾತು) ಮತ್ತು ಬರವಣಿಗೆಯ ನಡುವೆ ಇರುವ ದ್ವಂದ್ವತೆ ಹಾಗೂ ವ್ಯತ್ಯಾಸಗಳನ್ನು ಈ ಲೇಖನವು ವಿಶ್ಲೇಷಿಸುತ್ತದೆ. ಕನ್ನಡ ಲಿಖಿತ ರೂಪವು ವ್ಯಾಕರಣ, ಸಂಧಿ, ಪದರಚನೆ ಮತ್ತು ಸಾಹಿತ್ಯಿಕ ಪರಂಪರೆಯ ನಿಯಮಗಳನ್ನು ಆಧರಿಸಿದ್ದರೆ, ಆಡುಮಾತು ಧ್ವನಿಲೋಪ, ಸಂಕ್ಷಿಪ್ತತೆ ಮತ್ತು ಪ್ರಾದೇಶಿಕ ವೈವಿಧ್ಯತೆಗಳನ್ನು ಒಳಗೊಂಡಿರುತ್ತದೆ. ಲೇಖನದಲ್ಲಿ ಹ್ರಸ್ವ–ದೀರ್ಘ ಧ್ವನಿಗಳ ಸಂಕೇತಗಳು, ಉ–ಕಾರ ಮತ್ತು ಇ–ಕಾರಗಳ ಬಳಕೆಯ ಗೊಂದಲಗಳು ಹಾಗೂ ಅನುಸ್ವಾರದ (ಂ) ವಿವಿಧ ಧ್ವನಿ ರೂಪಗಳನ್ನು (ಮ್, ನ್, ಣ್, ಙ್, ಞ್) ಉದಾಹರಣೆಗಳೊಂದಿಗೆ ವಿವರಿಸಲಾಗಿದೆ. ಗಣಕಯಂತ್ರದ (ಕಂಪ್ಯೂಟರ್) ಈ ಯುಗದಲ್ಲಿ ಒತ್ತಕ್ಷರಗಳ ಬಳಕೆಯನ್ನು ಸರಳಗೊಳಿಸಲು ಮತ್ತು ಭಾಷಾ ಕಲಿಕೆಯನ್ನು ಸುಲಭವಾಗಿಸಲು ಉಚ್ಚಾರಣೆಗೆ ಅನುಗುಣವಾಗಿ ಬರವಣಿಗೆಯನ್ನು ಅಳವಡಿಸಿಕೊಳ್ಳುವ ಅಗತ್ಯತೆಯನ್ನು ಪ್ರತಿಪಾದಿಸಲಾಗಿದೆ.*

**Keywords:** *ಕನ್ನಡ ಭಾಷೆ, ಉಚ್ಚಾರಣೆ ಮತ್ತು ಬರವಣಿಗೆ, ಧ್ವನಿಲೋಪ, ಅನುಸ್ವಾರ, ಆಡುಮಾತು ಮತ್ತು ಪ್ರಮಾಣಿತ ರೂಪ, ಗಣಕಯಂತ್ರದಲ್ಲಿ ಕನ್ನಡ, ಪ್ರಾದೇಶಿಕ ವೈವಿಧ್ಯತೆ*

## ಪೀಠಿಕೆ

ಕನ್ನಡ ಭಾಷೆಯ ಉಚ್ಚಾರಣೆ ಮತ್ತು ಬರವಣಿಗೆ ಬಹುತೇಕ ಒಂದಕ್ಕೊಂದು ಹತ್ತಿರವಾಗಿದ್ದರೂ, ಎಲ್ಲ ಸಂದರ್ಭಗಳಲ್ಲಿಯೂ ಉಚ್ಚಾರಣೆ ಹೇಗಿದೆಯೋ ಹಾಗೆಯೇ ಬರೆಯಲಾಗುವುದಿಲ್ಲ. ಕನ್ನಡದ ಲಿಖಿತ ರೂಪವು ವ್ಯಾಕರಣ, ಸಂಧಿ, ಪದರಚನೆ, ಪರಂಪರೆ ಮತ್ತು ಶಿಷ್ಟ ಭಾಷೆಯ ನಿಯಮಗಳನ್ನು ಆಧರಿಸಿದೆ. ಆದರೆ ಮಾತನಾಡುವಾಗ ಪದಗಳ ಉಚ್ಚಾರಣೆಯಲ್ಲಿ ಬದಲಾವಣೆಗಳು ಸಹಜವಾಗಿ ಕಂಡುಬರುತ್ತವೆ.

- **ಮಾತು ಮತ್ತು ಬರಹದ ವ್ಯತ್ಯಾಸ :**

ಕನ್ನಡ ಭಾಷೆಯಲ್ಲಿ ಮಾತನಾಡುವಾಗ ಪದಗಳು ವೇಗವಾಗಿ ಉಚ್ಚರಿಸಲ್ಪಡುವುದರಿಂದ ಕೆಲವು ಅಕ್ಷರಗಳು ಅಥವಾ ಧ್ವನಿಗಳು ಸ್ಪಷ್ಟವಾಗಿ ಕೇಳಿಸದೇ ಇರಬಹುದು. ಉದಾಹರಣೆಗೆ, “ಮಾಡುತ್ತೇನೆ” ಎಂಬ ಪದವನ್ನು ಆಡುಮಾತಿನಲ್ಲಿ “ಮಾಡ್ತೀನಿ” ಎಂದು ಉಚ್ಚರಿಸುವುದುಂಟು. ಆದರೆ ಬರವಣಿಗೆಯಲ್ಲಿ ಪ್ರಮಾಣಿತ ರೂಪವಾದ “ಮಾಡುತ್ತೇನೆ” ಎಂದೇ ಬರೆಯಲಾಗುತ್ತದೆ.

- **ಧ್ವನಿಲೋಪ ಮತ್ತು ಧ್ವನಿಸ್ವಾಮ್ಯ :**

ಕನ್ನಡದಲ್ಲಿ ಮಾತನಾಡುವಾಗ ಕೆಲವು ಧ್ವನಿಗಳು ಲೋಪವಾಗುತ್ತವೆ. ಉದಾಹರಣೆಗೆ, “ಎಂದರೆ” ಎಂಬ ಪದವು ಆಡುಮಾತಿನಲ್ಲಿ “ಅಂದ್ರೆ” ಆಗುತ್ತದೆ. ಆದರೆ ಬರವಣಿಗೆಯಲ್ಲಿ “ಎಂದರೆ” ಎಂಬ

**Please cite this article as:** ನಾಗರಾಜ ಡಿ. ಮುರಗೋಡ. (2026). ಕನ್ನಡ ಭಾಷೆಯ ಉಚ್ಚಾರಣೆ ಮತ್ತು ಬರವಣಿಗೆಯ ದ್ವಂದ್ವತೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(1), 111–115

ಮೂಲರೂಪವನ್ನೇ ಬಳಸಲಾಗುತ್ತದೆ ಅಲ್ಲದೆ ಕನ್ನಡದಲ್ಲಿ ಹ್ರಸ್ವ ಮತ್ತು ದೀರ್ಘ ಧ್ವನಿಗಳನ್ನು ಒಂದೇ ರೀತಿ ಸೂಚಿಸುವುದಿಲ್ಲ.

'ಅ' ಕ್ಕೆ ಬಲಗಡೆಯ ಮೇಲೆ ಸುರುಳಿಯನ್ನು ಕೊಟ್ಟು 'ಆ' ಎನ್ನುತ್ತೇವೆ.

'ಉ' ಕ್ಕೆ ಬಾಲವನ್ನು ಕೊಟ್ಟು 'ಊ' ಎನ್ನುತ್ತೇವೆ.

'ಎ' ಕ್ಕೆ ಮೇಲೆ ಕಮಾನು ಕೊಟ್ಟು 'ಏ' ಎನ್ನುತ್ತೇವೆ.

'ಒ' ಕ್ಕೆ ತಲೆಯ ಮೇಲೆ ಗೀಟು ಹಾಕಿ 'ಓ' ಎನ್ನುತ್ತೇವೆ.

1. ಇನ್ನೂ ಧ್ವನಿಸ್ವಾಮ್ಯವಿರುವ ಅನೇಕ ಜೋಡಿ ಅಕ್ಷರಗಳಿಗೆ ಯಾವ ರೂಪ ಸ್ವಾಮ್ಯವೂ ಇಲ್ಲ. ಉದಾಹರಣೆಗೆ ಅಲ್ಪಪ್ರಾಣ 'ಕ', 'ಗ', 'ಚ' ಮತ್ತು 'ಜ' ಹಾಗೂ ಮಹಾಪ್ರಾಣಗಳಾದ 'ಖ', 'ಘ', 'ಛ' ಮತ್ತು 'ಝ' ಇವುಗಳಿಗೆ ಯಾವುದೇ ರೂಪಸ್ವಾಮ್ಯವೇ ಇಲ್ಲ.
2. ಉ–ಕಾರ ಸೂಚಕವಾದ ಕೊಂಬು, 'ು' ಎಲ್ಲೆಡೆಗೂ ಉ–ಕಾರ ಸೂಚಕವಲ್ಲ. 'ವ' ಕ್ಕೆ ಕೊಂಬು ಕೊಟ್ಟರೆ 'ಮ' ಆಗುತ್ತದೆ. ಖು, ಝು, ಮ ಮತ್ತು ಯ ಗಳಿಗೆ ಸಹಜವಾಗಿಯೇ ಕೊಂಬಿದೆ. ಈ ಕೊಂಬು 'ಉ' ಕಾರ ಸೂಚಕವಲ್ಲ.
3. ಇ–ಕಾರ ಸೂಚಕ ಮಾಡುವಾಗ ಬೇರೆ ಬೇರೆ ಅಕ್ಷರಗಳಿಗೆ ಬೇರೆ ಬೇರೆ ರೀತಿ ಬಳಸುತ್ತೇವೆ. ಉದಾ: ಕಿ, ಗಿ, ಡಿ, ಚಿ, ಜಿ, ಟಿ, ಣಿ
4. ಪರಸ್ಪರ ಧ್ವನಿ ಸಂಬಂಧವೇ ಇರದ ಅನೇಕ ಅಕ್ಷರಗಳಿಗೆ ರೂಪಸಾಮ್ಯತೆ ಇದೆ. ಉದಾ: ರ–ಠ, ವ–ಛ, ಪ–ಷ–ಫ

- **ಕನ್ನಡದ ಅಕ್ಷರಗಳು ಪೂರ್ಣವಾಗಿ ಧ್ವನಿಬದ್ಧವಲ್ಲ**

'ಹಸ್ತ', 'ಪುಸ್ತಕ' ಇವುಗಳನ್ನು ಬರೆಯುವಾಗ 'ಸ' ಕ್ಕೆ ತಲೆಕಟ್ಟು ಕೊಟ್ಟಿದ್ದೇವೆ.

ಆದರೆ ಇವುಗಳನ್ನು ಓದುವಾಗ 'ಸ' ಅನ್ನು ಅರ್ಧಾಕ್ಷರವಾಗಿಯೂ, 'ತ' ಅನ್ನು ತಲೆಕಟ್ಟಿರುವ ಅಕ್ಷರದಂತೆಯೂ ಉಚ್ಚಾರ ಮಾಡುತ್ತೇವೆ. 'ಶಕ್ತಿ' ಮತ್ತು 'ಯುಕ್ತಿ' ಇವುಗಳಲ್ಲಿ 'ಇ' ಕಾರವನ್ನು 'ಕ' ಕ್ಕೆ ಕೊಟ್ಟಿದ್ದರೂ, ಇವುಗಳನ್ನು ಉಚ್ಚಾರಣೆ ಮಾಡುವಾಗ 'ಇ' ಕಾರವನ್ನು 'ತ'ಕ್ಕೆ ಸೇರಿಸುತ್ತೇವೆ.

- **ದೀರ್ಘ ವ್ಯಂಜನಗಳನ್ನು ಬೇರೆ ಬೇರೆ ಚಿಹ್ನೆಗಳಿಂದ ಸೂಚಿಸುತ್ತೇವೆ.**

ಉದಾ:

'ಕಾ', 'ಗಾ' – 'ಾ'

'ಕೂ', 'ಗೂ' – 'ೂ'

'ಕೀ', 'ಕೇ' – 'ೀ'

- **ಅನುಸ್ವಾರವು ಒಂದೇ ಧ್ವನಿಯನ್ನು ಸೂಚಿಸುವುದಿಲ್ಲ.**

ಕನ್ನಡ ಭಾಷೆಯಲ್ಲಿ ಬರುವಂತ ಅನುನಾಸಿಕಗಳನ್ನು ತೆಗೆದುಕೊಂಡಾಗ ಮ, ನ, ಣ, ಞ, ಙ ಈ ಎಲ್ಲ ಅಕ್ಷರಗಳಿಗೆ ಬರವಣಿಗೆಯಲ್ಲಿ 'ಂ' ಒಂದೇ ಸಂಕೇತವನ್ನು ಬಳಸುತ್ತೇವೆ. ಈ ಅನುಸ್ವಾರವು ಒಂದೇ ಧ್ವನಿಯನ್ನು ಸೂಚಿಸುವುದಿಲ್ಲ. ಕನ್ನಡ ವರ್ಣಮಾಲೆಯನ್ನು ಕಲಿಸುವಾಗ 'ಅಂ' ಅನ್ನು 'ಅಮ್' ಎಂದು ಉಚ್ಚಾರ ಮಾಡುವಂತೆ ತಿಳಿಸುತ್ತಾರೆ.

ಉದಾ :

ಅಂಬಿ–ಅಮ್‌ಬಿ ಇಂಪು–ಇಮ್‌ಪು

ಇಂಬು-ಇಮ್‌ಬು ಕಂಪು–ಕಮ್‌ಪು

ಕಂಬ–ಕಮ್‌ಬ ಚಂಪು–ಚಮ್‌ಪು

ಕಂತೆ, ಕಂದ ಇವುಗಳಲ್ಲಿ 'ತ್' ಮತ್ತು 'ದ್' ಹಿಂದೆ ಅನುಸ್ವಾರವು ಬಂದಾಗ 'ನ್' ಧ್ವನಿಯನ್ನು ಸೂಚಿಸುತ್ತದೆ. ಇವುಗಳನ್ನು ಕನ್‌ತೆ, ಕನ್‌ದ ಎಂದು ಉಚ್ಚರಿಸುತ್ತೇವೆ.

ಉದಾ :

ಅಂತ - ಅನ್‌ತ ಅಂದ–ಅನ್‌ದ

ಇಂತು–ಇನ್‌ತು ಇಂದು–ಇನ್‌ದು

ಎಂತು-ಎನ್‌ತು ಎಂದು–ಎನ್‌ದು

ಗಂಡ, ಕುಂಟ ಇವುಗಳಲ್ಲಿ 'ಡ್' ಮತ್ತು 'ಟ್' ಹಿಂದೆ ಅನುಸ್ವಾರವು ಬಂದಾಗ 'ಣ್' ಧ್ವನಿಯನ್ನು

ಸೂಚಿಸುತ್ತದೆ. ಇವುಗಳನ್ನು ಗಣ್‌ಡ, ಕುಣ್‌ಟ ಎಂದು ಉಚ್ಚರಿಸುತ್ತೇವೆ.

ಉದಾ :

ಅಂಟು–ಅಣ್‌ಟು ಅಂಡ–ಅಣ್‌ಡ

ಉಂಟು–ಉಣ್‌ಟು ಉಂಡೆ–ಉಣ್‌ಡೆ

ಕಂಟಿ–ಕಣ್‌ಟಿ ಕಂಡು-ಕಣ್‌ಡು

ರಂಜನ, ಅಂಚು ಇವುಗಳಲ್ಲಿ 'ಜ' ಮತ್ತು 'ಚ' ಹಿಂದೆ ಅನುಸ್ವಾರವು ಬಂದಾಗ 'ಞ' ಧ್ವನಿಯನ್ನು ಸೂಚಿಸುತ್ತದೆ. ಇವುಗಳನ್ನು ರಞ್‌ಜನ, ಅಞ್‌ಚು ಎಂದು ಉಚ್ಚರಿಸುವುದಿಲ್ಲ. ಉಚ್ಚರಿಸುವುದು ಕಷ್ಟ.

ಉದಾ :

ಪಂಚ–ಪಞ್‌ಚ ಪಂಜ–ಪಞ್‌ಜ

ಮಂಚ–ಮಞ್‌ಚ ಮಂಜು–ಮಞ್‌ಜು

ಸಂಚು–ಸಞ್‌ಚು ಸಂಜೆ–ಸಞ್‌ಜೆ

ಅಂಗ, ಅಂಕ ಇವುಗಳಲ್ಲಿ 'ಗ' ಮತ್ತು 'ಕ' ಹಿಂದೆ ಅನುಸ್ವಾರವು ಬಂದಾಗ 'ಙ' ಧ್ವನಿಯನ್ನು ಸೂಚಿಸುತ್ತದೆ. ಇವುಗಳನ್ನು ಅಙ್‌ಗ, ಅಙ್‌ಕ ಎಂದು ಉಚ್ಚರಿಸುವುದಿಲ್ಲ.

ಉದಾ :

ಇಂಕು–ಇಙ್‌ಕು ಇಂಗು–ಇಙ್‌ಗು

ಬಂಕ–ಬಙ್‌ಕ ಬಂಗ–ಬಙ್‌ಗ

ಮಂಕ-ಮಙ್‌ಕ ಮಂಗ–ಮಙ್‌ಗ

ಸಂಹಾರ, ಸಂಶಯ ಇವುಗಳಲ್ಲಿ ಅನುಸ್ವಾರದ ಮುಂದೆ ಬರುವ ಅವರ್ಗೀಯ ವ್ಯಂಜನ, ಇವುಗಳನ್ನು ಸಮ್‌ಹಾರ, ಸಮ್‌ಶಯ ಎನ್ನುತ್ತೇವೆ.

ಉದಾ :

ಸಂಹಾರ–ಸಮ್‌ಹಾರ ಸಂರಕ್ಷಕ–ಸಮ್‌ರಕ್ಷಕ

ಸಂಲಗ್ನ–ಸಮ್‌ಲಗ್ನ ಸಂವಾದ–ಸಮ್‌ವಾದ

ಅಂಶ–ಅಮ್‌ಶ ಕಂಸ–ಕಮ್‌ಸ

ಹೀಗಾಗಿ ಅನುಸ್ವಾರ ಒಂದು ನಿರ್ದಿಷ್ಟವಾದ ಅಥವಾ ಒಂದೇ ಸೂತ್ರಕ್ಕೆ ಒಳಗಾದ ಧ್ವನಿ ಸೂಚಕವಲ್ಲ.

ಯಾವ ಯಾವ ಮೂಲ ಅಕ್ಷರಗಳ ಜೊತೆಗೆ ಅನುಸ್ವಾರವು ಬರುತ್ತದೆ ಎಂಬುದನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಸಂಕ್ಷಿಪ್ತ ಕನ್ನಡ ನಿಘಂಟುವಿನಿಂದ ಆಯ್ದುಕೊಂಡು ಉದಾಹರಣಾರ್ಥವಾಗಿ ಈ ಕೆಳಗಿನ ಕೋಷ್ಟಕದಲ್ಲಿ ಕೊಡಲಾಗಿದೆ.

ಅ – ಅಂಕ, ಅಂಗ, ಅಂಚು, ಅಂಟು, ಅಂಡ, ಅಂತ

ಆ – ಆಂಗ್ಲ, ಆಂದಿ, ಆಂತ್ರ, ಆಂದೆ, ಆಂಶಿಕ

ಇ – ಇಂಕು, ಇಂಗು, ಇಂಚು, ಇಂಜಿನ್ನು, ಇಂಟು

ಈ – ಈಂಚು, ಈಂಟು

ಉ – ಉಂಕಿ, ಉಂಚ, ಉಂಟು, ಉಂಡೆ, ಉಂತು

ಊ – ಊಂಕು, ಊಂಟು

ಎ – ಎಂಜಲ್, ಎಂಟು, ಎಂತು ಎಂದು

ಏ – ಏಂಕು

ಐ – ಐಂದ್ರ

ಒ – ಒಂಟಿ, ಒಂತು ಒಂದು, ಒಂಬತ್ತು

ಓ – ಓಂಕಾರ, ಓಂಗು, ಓಂಪುಡಿ

ಔ – ಔಂಕು, ಔಂಚು, ಔಂಡು

ಕ – ಕಂಕಣ, ಕಂಗಳ, ಕಂಚ, ಕಂಜ, ಕಂಟಿ

ಖ – ಖಂಜ, ಖಂಡ

ಗ – ಗಂಗೆ, ಗಂಜಿ, ಗಂಟು, ಗಂಡ, ಗಂದೆ

ಘ – ಘಂಟೆ

ಚ – ಚಂಗ, ಚಂಚ, ಚಂಡ, ಚಂದ, ಚಂಪು

ಛ – ಛಂದ

ಜ – ಜಂಕು, ಜಂಗಮ, ಜಂಜಡ, ಜಂಟಿ, ಜಂಡೆ, ಜಂತ, ಜಂಪು, ಜಂಬ

ಝ – ಝಂಕೆ, ಝಂಪೆ

ಟ – ಟಂಕ

ಡ – ಡಂಕು, ಡಂಗ, ಡಂಬ

ತ – ತಂಗು, ತಂಟಾವಂಚ, ತಂಟೆ, ತಂಡ, ತಂತಿ

ದ – ದಂಗು, ದಂಟು, ದಂಡ, ದಂತ, ದಂದೆ

ನ – ನಂಜ, ನಂಟ, ನಂತರ, ನಂದ, ನಂಬು

ಪ – ಪಂಕ, ಪಂಗ, ಪಂಚ, ಪಂಟು, ಪಂಡಿತ, ಪಂತ

ಬ – ಬಂಕ, ಬಂಗ, ಬಂಜೆ, ಬಂಟ, ಬಂಡ, ಬಂದ

ಭ – ಭಂಗ, ಭಂಜನ, ಭಂಟ, ಭಂಡ, ಭಂಭಾ

ಮ – ಮಂಕ, ಮಂಗ, ಮಂಚ, ಮಂಟಿಕೆ, ಮಂಡ

ಯ – ಯಂತ್ರ

ರ – ರಂಕ, ರಂಗ, ರಂಜಿಸು, ರಂಟೆ, ರಂದಿ, ರಂಪ, ರಂಭೆ

ವ – ವಂಕ, ವಂಗ, ವಂಚಕ, ವಂಜುಳ, ವಂಟ, ವಂತಿಗೆ

ಶ – ಶಂಕು, ಶಂಪೆ, ಶಂಬ

ಷ – ಷಂಡ

ಸ – ಸಂಕಟ, ಸಂಗಡ, ಸಂಚು, ಸಂಜೆ, ಸಂತ, ಸಂಧಿ, ಸಂಪು

ಹ – ಹಂಕರ, ಹಂಗು, ಹಂಚು, ಹಂಜಿ, ಹಂಡೆ, ಹಂತ

ಕನ್ನಡದಲ್ಲಿ ಬರುವಂತ ಅನುನಾಸಿಕಗಳನ್ನು ನಾವು ಉಚ್ಚರಣೆಯಂತೆ ಬರವಣಿಗೆ ಮಾಡಿದರೆ ನಮ್ಮ ಮಕ್ಕಳು ಪ್ರಶ್ನೆಗಳನ್ನು ಹಾಕಿ ನಮ್ಮನ್ನು ಮುಜುಗರಕ್ಕೀಡು ಮಾಡುವುದಿಲ್ಲ. ಇತರ ಭಾಷೆಯವರೂ ಸಹ ಕನ್ನಡ ಕಲಿಯಲು, ಮಾತನಾಡಲು ಮತ್ತು ಬರೆಯಲು ಸುಲಭವಾಗುವುದು. ಸರಿಯಾಗಿ ಅಕ್ಷರಗಳನ್ನು ಕಲಿತರೆ ಸಾಕು. ಸ್ವಲ್ಪ ಯೋಚಿಸಿದರೆ ಉಚ್ಚಾರಣೆಯಂತೆಯೇ ಬರವಣಿಗೆ ಸರಿಯೆನಿಸುತ್ತದೆ. ಈಗೀನ ಯುಗ ಗಣಕಯಂತ್ರದ ಯುಗವಾದ್ದದ್ದರಿಂದ ಗಣಕಯಂತ್ರ ಬಳಸುವುದು ಸುಲಭವಾಗುತ್ತದೆ. ಗಣಕಯಂತ್ರ ಬಳಸುವಾಗ ಒತ್ತಕ್ಷರಗಳನ್ನು ಬರೆಯಲು ಎರಡು ಮೂರು ಕೀಗಳನ್ನು ಬಳಸಬೇಕಾಗುತ್ತದೆ. ಉಚ್ಚಾರಣೆಯಂತೆ ಬರವಣಿಗೆ ಇದ್ದರೆ ಗಣಕಯಂತ್ರದಲ್ಲಿ ಕನ್ನಡವನ್ನು ಕಲಿಯುವುದು ಮತ್ತು ಬಳಸುವುದು ತುಂಬಾ ಸರಳವಾಗುತ್ತದೆ.

- **ಸಂಕ್ಷಿಪ್ತ ಉಚ್ಚಾರಣೆ :**

ಆಡುಮಾತಿನಲ್ಲಿ ಪದಗಳನ್ನು ಸಂಕ್ಷಿಪ್ತವಾಗಿ ಹೇಳುವುದು ಸಾಮಾನ್ಯ. "ಇಲ್ಲ" → "ಲ್ಲ", "ಅದು" → "ದು", "ಏನು" → "ಏನ್" ಮುಂತಾದ ರೂಪಗಳು ಪ್ರಾದೇಶಿಕ ಅಥವಾ ಆಡುಮಾತಿನಲ್ಲಿ ಕಂಡುಬರುತ್ತವೆ. ಇವುಗಳನ್ನು ಸಾಮಾನ್ಯವಾಗಿ ಔಪಚಾರಿಕ ಬರವಣಿಗೆಯಲ್ಲಿ ಬಳಸುವುದಿಲ್ಲ.

- **ಸಂಧಿಯಿಂದ ಉಂಟಾಗುವ ವ್ಯತ್ಯಾಸ :**

ಎರಡು ಪದಗಳು ಸೇರಿಕೊಂಡಾಗ ಅವುಗಳ ಉಚ್ಚಾರಣೆಯಲ್ಲಿ ಬದಲಾವಣೆ ಉಂಟಾಗಬಹುದು. ಆದರೆ ಬರವಣಿಗೆಯಲ್ಲಿ ವ್ಯಾಕರಣಬದ್ಧ ರೂಪವನ್ನು ಅನುಸರಿಸಲಾಗುತ್ತದೆ. ಹೀಗಾಗಿ ಕೇಳಿಸುವ ರೂಪ ಮತ್ತು ಬರೆಯುವ ರೂಪಗಳಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ.

- **ಪ್ರಾದೇಶಿಕ ಉಚ್ಚಾರಣೆ :**

ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಕನ್ನಡ ಭಾಷೆಯ ಉಚ್ಚಾರಣೆ ವಿಭಿನ್ನವಾಗಿದೆ. ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಕರಾವಳಿ ಕರ್ನಾಟಕ ಮತ್ತು ಹಳೆ ಮೈಸೂರು ಭಾಗಗಳಲ್ಲಿ ಒಂದೇ ಪದವನ್ನು ಸ್ವಲ್ಪ ವಿಭಿನ್ನವಾಗಿ ಉಚ್ಚರಿಸಬಹುದು. ಆದರೆ ಪ್ರಮಾಣಿತ ಕನ್ನಡ ಬರವಣಿಗೆಯಲ್ಲಿ ಸಾಮಾನ್ಯವಾಗಿ ಒಂದೇ ರೂಪವನ್ನು ಬಳಸಲಾಗುತ್ತದೆ.

- **ವ್ಯಾಕರಣದ ಪ್ರಭಾವ :**

ಬರವಣಿಗೆಯ ನಿಯಮವು ವ್ಯಾಕರಣ ನಿಯಮಗಳಿಗೆ ಒಳಪಟ್ಟಿರುತ್ತದೆ. ಮಾತನಾಡುವಾಗ ಸಹಜವಾಗಿ ಬರುವ ಆಡುಮಾತಿನ ರೂಪಗಳನ್ನು ಹಾಗೆಯೇ ಬರೆಯುವುದರಿಂದ ಭಾಷೆಯ ಪ್ರಮಾಣಿತ ರೂಪಕ್ಕೆ ಧಕ್ಕೆ ಉಂಟಾಗಬಹುದು. ಆದ್ದರಿಂದ ಬರವಣಿಗೆಯಲ್ಲಿ ಸರಿಯಾದ ಪದರೂಪ, ವಿಭಕ್ತಿ, ಕ್ರಿಯಾಪದ ಮತ್ತು ವಾಕ್ಯರಚನೆಯನ್ನು ಅನುಸರಿಸಲಾಗುತ್ತದೆ.

- **ಪರಂಪರೆಯ ಪ್ರಭಾವ :**

ಕನ್ನಡ ಲಿಪಿ ಮತ್ತು ಬರವಣಿಗೆಗೆ ದೀರ್ಘವಾದ ಸಾಹಿತ್ಯಿಕ ಪರಂಪರೆಯಿದೆ. ಪಂಪ, ಪೊನ್ನ, ರನ್ನ, ಜನ್ನರಿಂದ ಹಿಡಿದು ಆಧುನಿಕ ಸಾಹಿತಿಗಳವರೆಗೆ ಬಳಕೆಯಲ್ಲಿರುವ ಅನೇಕ ಪದಗಳ ಲಿಖಿತ ರೂಪಗಳು ಪರಂಪರೆಯಿಂದ ಸ್ಥಿರವಾಗಿವೆ. ಉಚ್ಚಾರಣೆಯಲ್ಲಿ ಬದಲಾವಣೆ ಬಂದರೂ ಬರವಣಿಗೆಯ ರೂಪ ತಕ್ಷಣ ಬದಲಾಗುವುದಿಲ್ಲ.

'ಕನ್ನಡ ಭಾಷೆಯ ಉಚ್ಚಾರಣೆಯಂತೆ ಬರವಣಿಗೆ ಇಲ್ಲ' ಎನ್ನುವುದು ಸಂಪೂರ್ಣವಾಗಿ ಸರಿಯಾದ ಹೇಳಿಕೆಯಲ್ಲವಾದರೂ ಉಚ್ಚಾರಣೆ ಮತ್ತು ಬರವಣಿಗೆಯ ನಡುವೆ ಕನ್ನಡದಲ್ಲಿ ಸಾಕಷ್ಟು ಸಾಮ್ಯತೆ ಇದೆ. ಆದರೆ ಆಡುಮಾತಿನ ವೇಗ, ಧ್ವನಿಲೋಪ, ಸಂಕ್ಷಿಪ್ತ ಉಚ್ಚಾರಣೆ, ಪ್ರಾದೇಶಿಕ ವೈವಿಧ್ಯತೆ, ವ್ಯಾಕರಣ ಮತ್ತು ಸಾಹಿತ್ಯಿಕ ಪರಂಪರೆಗಳಿಂದಾಗಿ ಕೆಲವು ವ್ಯತ್ಯಾಸಗಳು ಸಹಜವಾಗಿ ಕಂಡುಬರುತ್ತವೆ.

**ಆಕರ ಗ್ರಂಥಗಳು**


- ಬಿಳಿಗಿರಿ, ಎಚ್.ಎಸ್. *ಭಾಷೆ ಮತ್ತು ಭಾಷಾ ವಿಜ್ಞಾನ.* ಕನ್ನಡ ಪುಸ್ತಕ ಪ್ರಾಧಿಕಾರ.
- ಚಿದಾನಂದ ಮೂರ್ತಿ, ಎಂ. *ಭಾಷಾ ವಿಜ್ಞಾನದ ಮೂಲತತ್ವಗಳು.* ಡಿ.ವಿ.ಕೆ. ಮೂರ್ತಿ ಪ್ರಕಾಶನ,
- ಕನ್ನಡ ವಿಶ್ವಕೋಶ, ಕನ್ನಡ ಗಣಕ ಪರಿಷತ್ತು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
- ಕನ್ನಡ ವಿಕಿಪೀಡಿಯ ಒಂದು ಮುಕ್ತ ವಿಶ್ವಕೋಶ
- ಕೆಂಪೆಗೌಡ, ಕೆ. (1996). *ಸಾಮಾನ್ಯ ಭಾಷಾವಿಜ್ಞಾನ.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
- ಕೆಂಪೇಗೌಡ, ಕೆ. *ವರ್ಣನಾತ್ಮಕ ಭಾಷಾ ವಿಜ್ಞಾನ.* ಅಕ್ಷರ ಪ್ರಕಾಶನ.
- ರಾಜೇಶ್ವರಿ ಮಹೇಶ್ವರಯ್ಯ. (2003). *ಆಧುನಿಕ ವರ್ಣನಾತ್ಮಕ ಭಾಷಾವಿಜ್ಞಾನ.* ಸಮಾಜ ಪುಸ್ತಕಾಲಯ.
- ಸಂಗಮೇಶ ಸವದತ್ತಿಮಠ. ಕನ್ನಡ ಭಾಷಾ ವಿಜ್ಞಾನ, ಚೇತನ ಬುಕ್‌ಹೌಸ್.
- ಸಂಕ್ಷಿಪ್ತ ಕನ್ನಡ ನಿಘಂಟು (ಪರಿಷ್ಕೃತ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
- ವಿಲ್ಯಂ ಮಾಡ್ತ. (2003). *ಕನ್ನಡ ಭಾಷೆಯ ರೂಪರೇಷೆಗಳು.* ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.